<u>ದಿನಾಂಕಃ 04-08-2022 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಭೋದಿಸಲಾಯಿತು.</u>

ನಾನು ಈ ದಿನ ನ್ಯಾಯಾಲಯಕ್ಕೆ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ . ಸದರಿ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಇರುವ ಎಲ್ಲಾ ವಿಷಯಗಳು ಸತ್ಯವಾಗಿವೆ.

**ಮುಂದುವರೆದ ಮುಖ್ಯ ವಿಚಾರಣೆ: ಅರ್ಜಿದಾರರ ಪರ ವಕೀಲರಾದ ಶ್ರೀ ಆರ್.ಬಿ.ಎನ್ ವಕೀಲರಿಂದಃ**

ದಿಃ 05-12-2010 ರಂದು ರಾಣೆಬೆನ್ನೂರ ಗ್ರಾಮಾಂತರ ಪೊಲೀಸ ಠಾಣೆ ಅಪರಾಧ ಸಂಖ್ಯೆ.257/2010 ರಲ್ಲಿ ದಾಖಲಾಗಿರುವ ಪ್ರಥಮ ವರ್ತಮಾನ ವರದಿ, ದೂರು, ಅಂತಿಮ ವರದಿ, ಸ್ಥಳಪಂಚನಾಮೆ, ಶವ ತನಿಖಾ ವರದಿ, ಶವ ಪರೀಕ್ಷಾ ವರದಿ, ಐ.ಎಂ.ವಿ ವರದಿಯ ದೃಢಿಕೃತ ನಕಲುಗಳನ್ನು ಹಾಜರು ಮಾಡಿದ್ದೇನೆ, ಅವುಗಳನ್ನು ಕ್ರಮವಾಗಿ ನಿಪಿ-1 ರಿಂದ ನಿ.ಪಿ-7 ಎಂದು ಗುರುತಿಸಲಾಯಿತು. ಕರ್ನಾಟಕ ಸರ್ಕಾರದವರು ನೀಡಿರುವ ನಮ್ಮ ಕುಟುಂಬದ ಪಡಿತರ ಚೀಟಿಯ Attested Copy (ಮೂಲ ಪ್ರತಿಯೊಂದಿಗೆ ತಾಳೆ ಮಾಡಿ ಹಿಂದಿರುಗಿಸಲಾಗಿದೆ) ನ್ನು ಹಾಜರು ಮಾಡಿದ್ದೇನೆ ಅದನ್ನು

ನಿ.ಪಿ-8 ಎಂದು ಗುರುತಿಸಲಾಯಿತು. ಭಾರತ ಸರ್ಕಾರದವರು ನೀಡಿರುವ ನನ್ನ ಮತ್ತು ನನ್ನ ಗಂಡುಮಕ್ಕಳಾದ 2 ರಿಂದ 4 ನೇ ಅರ್ಜಿದಾರರ ವಿಶಿಷ್ಟ ಗುರುತಿನ ಚೀಟಿಯ Attested Copy (ಮೂಲ ಪ್ರತಿಯೊಂದಿಗೆ ತಾಳೆ ಮಾಡಿ ಹಿಂದಿರುಗಿಸಲಾಗಿದೆ) ಗಳನ್ನು ಹಾಜರು ಮಾಡಿದ್ದೇನೆ ಅವುಳನ್ನು ಕ್ರಮವಾಗಿ ನಿಪಿ-9 ರಿಂದ ನಿ.ಪಿ-12 ಎಂದು ಗುರುತಿಸಲಾಯಿತು. ಭಾರತ ಸರ್ಕಾರದವರು ನೀಡಿರುವ ನನ್ನ ಮತ್ತು ನನ್ನ ಗಂಡುಮಕ್ಕಳಾದ 2 ರಿಂದ 4 ನೇ ಅರ್ಜಿದಾರರ ಪಾನ್ ಕಾರ್ಡಗಳ Attested Copy (ಮೂಲ ಪ್ರತಿಯೊಂದಿಗೆ ತಾಳೆ ಮಾಡಿ ಹಿಂದಿರುಗಿಸಲಾಗಿದೆ) ಗಳನ್ನು ಹಾಜರು ಮಾಡಿದ್ದೇನೆ ಅವುಳನ್ನು ಕ್ರಮವಾಗಿ ನಿಪಿ-13 ರಿಂದ ನಿ.ಪಿ-16 ಎಂದು ಗುರುತಿಸಲಾಯಿತು. ಮೇಡ್ಲೇರಿ ಗ್ರಾಮದ ಸರ್ವೇ ನಂ.125*/* ರಲ್ಲಿ 8 ಎಕರೆ 38 ಗುಂಟೆ ಜಮೀನು ಈ ಅರ್ಜಿಯ 1(ಬಿ) , 1(ಸಿ) , 1(ಎಫ) ಎದುರುದಾರರ ಹೆಸರಿನಲ್ಲಿ ಇದೆ ಎಂದು ತೋರಿಸಲು 2019-20 ನೇ ಸಾಲಿನ ಗಣಕೀಕೃತ ಪಹಣಿಯನ್ನು ಹಾಜರು ಮಾಡಿದ್ದೇನೆ ಅದನ್ನು ನಿ.ಪಿ-17 ಎಂದು ಗುರುತಿಸಲಾಯಿತು. ಈ ಅರ್ಜಿಯ 2 ನೇ ಅರ್ಜಿದಾರ

***PW-1***

ಅಂಗವಿಕಲನಾಗಿದ್ದಾನೆ ಎಂದು ತೋರಿಸಲು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು , ಹಾವೇರಿ ರವರು ನೀಡಿರುವ ಅಂಗವಿಕಲ ಪ್ರಮಾಣ ಪತ್ರದ Attested Copy (ಮೂಲ ಪ್ರತಿಯೊಂದಿಗೆ ತಾಳೆ ಮಾಡಿ ಹಿಂದಿರುಗಿಸಲಾಗಿದೆ) ಯ ಹಾಜರು ಮಾಡಿದ್ದೇನೆ ಅದನ್ನು ನಿ.ಪಿ–18 ಎಂದು ಗುರುತಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಗೆ:** ಸಮಯ ಬೇಡಿದ್ದರಿಂದ ಮುಂದೂಡಲಾಗಿದೆ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

Sd/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ ರಾಣೇಬೆನ್ನೂರು.